ST. FRANCIS DE SALES COLLEGE
A FRANSALIAN INSTITUTE OF HIGHER EDUCATION AUTONOMOUS
NAAC A GRADE ● AFFILIATED TO BANGALORE UNIVERSITY ● AICTE APPROVED ● 2(F) & 12 (B) RECOGNITION OF UGC ● ISO 9001:2015 CERTIFIED
Electronics City P.O., Bengaluru - 560 100, Karnataka, INDIA (+91) 8088140679 pro@sfscollege.in www.sfscollege.in

# END SEMESTER EXAMINATION – NOV/DEC 2025

## KANNADA – I SEMESTER BBA (F+R)

## 24BBA11KA: ವ್ಯವಹಾರ ನಿರ್ವಹಣಾ ಕನ್ನಡ 1

**Time: 3 Hours** **Max. Marks: 80**

**I. ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (160 ಪದಗಳಿಗೆ ಮೀರದಂತೆ)** 3x10=30

1. ಆಧುನಿಕತೆಯ ಬದುಕನ್ನು ಕವಿ "ನಮ್ಮ ನಗರದ ಬದುಕು" ಕವಿತೆಯಲ್ಲಿ ಹೇಗೆ ಚಿತ್ರಿಸಿದ್ದಾರೆ? ವಿವರಿಸಿ.
2. ಅನಾರೋಗ್ಯದ ಸಂದರ್ಭದಲ್ಲಿ ಬಂಧು–ಬಳಗದವರ ವರ್ತನೆಯನ್ನು "ಹೃದಯದ ತೊಂದರೆ" ಕತೆಯ ಹಿನ್ನೆಲೆಯಲ್ಲಿ ಬರೆಯಿರಿ.
3. ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಕವಿತೆಯ ಮಹತ್ವವೇನು? ವಿವರಿಸಿ.
4. ವಾರೆನ್ ಬಫೆಟ್ ಯಾರು? ನಾವು ಅವರಿಂದ ಕಲಿಯಬಹುದಾದ ಪಾಠಗಳಾವುವು? ವಿವರಿಸಿ.

**II. ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (80 ಪದಗಳಿಗೆ ಮೀರದಂತೆ)** 5x5=25

1. ಸ್ಮಾರ್ಟ್ ಸಹಾಯಕರು ಎಂದರೆ ಯಾರು? ಚರ್ಚಿಸಿ.
2. ಅರ್ಭುತನಾಥ ಬ್ಯಾಂಕಿಂಗ್ ಕಂಪನಿ ದಿವಾಳಿಯಾಗಲು ಕಾರಣಗಳಾವುವು? ವಿವರಿಸಿ
3. ಏಕಾಂಗಿಯಾಗಿ ಲಲಿತಾ ಬದುಕನ್ನು ಕಟ್ಟಿಕೊಂಡ ಬಗೆ ಹೇಗೆ? ವಿವರಿಸಿ.
4. ಹೆಣ್ಣಿನಲ್ಲಿರುವ ತವರಿನ ಹಂಬಲ ಯಾವ ಸ್ವರೂಪದ್ದು?
5. ತತ್ಸಮ ತದ್ಭವ ಎಂದರೇನು? ಉದಾಹರಣೆಯೊಂದಿಗೆ ವಿವರಿಸಿ.
6. ಆದಿ ಕವಿ ಪಂಪನನ್ನು ಪರಿಚಯಿಸಿ.

**III. ಕೆಳಕಂಡ ಪಠ್ಯವನ್ನು ಮೂರನೇ ಒಂದು ಭಾಗಕ್ಕೆ ಸಂಕ್ಷೇಪಿಸಿ ಬರೆದು, ಸೂಕ್ತ ಶೀರ್ಷಿಕೆ ನೀಡಿ.** 1x5=5

ಒಂದು ಕಾಡಿನ ನಿವಾಸಿಗಳಾಗಿದ್ದ ಕಪ್ಪೆಗಳಲ್ಲಿ ಕೆಲವು ಒಂದು ದಿನ ಆಹಾರ ಹುಡುಕಿಕೊಂಡು ಕುಪ್ಪಳಿಸುತ್ತ ಗುಂಪಾಗಿ ಹೋಗುತ್ತಿದ್ದವು. ಅವುಗಳಲ್ಲಿ ಎರಡು ಆಯ ತಪ್ಪಿ ದಾರಿಯಲ್ಲಿದ್ದ ಹಳ್ಳವೊಂದಕ್ಕೆ ಬಿದ್ದು ಬಿಟ್ಟವು. ಮಿಕ್ಕ ಕಪ್ಪೆಗಳು ಹಳ್ಳದ ಸುತ್ತ ಗುಂಪು ಕೂಡಿದವು. ಇಣುಕಿ ನೋಡಿದವು. ಹಳ್ಳವು ಆಳವಾಗಿತ್ತು. ಒಳಗೆ ಬಿದ್ದ ನತದೃಷ್ಟ ಕಪ್ಪೆಗಳನ್ನು ಕುರಿತು, "ಇಷ್ಟು ಆಳದ ಹಳ್ಳದಿಂದ ಹೇಗೆ ಮೇಲಕ್ಕೆ ಬರುತ್ತೀರಿ? ನಿಮ್ಮ ಕತೆ ಮುಗೀತು" ಎಂದು ಒಕ್ಕೊರಲಿನಿಂದ ವಟಗುಟ್ಟಿದವು. ಒಳಗೆ ಬಿದ್ದ ಕಪ್ಪೆಗಳು ಪ್ರಾಣ ಉಳಿಸಿಕೊಳ್ಳಲು ಜಿಗಿದಾಡಿದಂತೆಲ್ಲ, ಹಳ್ಳದ ಮೇಲೆ ಸುತ್ತುವರೆದು ಕುಳಿತಿದ್ದ ಕಪ್ಪೆಗಳು, "ನೀವು ಮೇಲೆ ಬರುವುದು ಸಾಧ್ಯವೇ ಇಲ್ಲ. ಸುಮ್ಮನೇ ಯಾಕೆ ಎಗರಾಡಿ ಮೈ ನೋಯಿಸಿಕೊಳ್ಳುತ್ತೀರಿ. ನೀವು ಸತ್ತಂತೆಯೇ ಸರಿ. ವ್ಯರ್ಥ ಪ್ರಯತ್ನ" ಎಂದು ಮತ್ತೆ ಮತ್ತೆ ವಟಗುಟ್ಟುತ್ತಲೇ ಇದ್ದವು.

ಹಳ್ಳದ ಮೇಲಿನಿಂದ ಕಪ್ಪೆಗಳು ಸಾಮೂಹಿಕವಾಗಿ ಪದೇ ಪದೇ ವಟಗುಟ್ಟುತ್ತ ಹಳ್ಳದೊಳಗಿನ ಕಪ್ಪೆಗಳ ಪ್ರಯತ್ನವನ್ನು ನಿರುತ್ಸಾಹಗೊಳಿಸುತ್ತಿದ್ದವು. ತಳದಲ್ಲಿ ಜಿಗಿದಾಡುತ್ತಿದ್ದ ಒಂದು ಕಪ್ಪೆಯು ತಾನು ಹೋರಾಡಿ ಪಾರಾಗಬಲ್ಲೆ ಎನ್ನುವ ಅಂತಃಸ್ಥೈರವನ್ನೇ ಕಳೆದುಕೊಂಡಿತು. ಮೃತ್ಯುಕೂಪದಿಂದ ಹೊರ ಬರಲಾರೆ ಎನಿಸಿ ಎದೆ ಹಾರಿ ಅಸುನೀಗಿತು. ಇನ್ನೂ ಜೀವಂತವಾಗಿದ್ದ ಕಪ್ಪೆಯು ತನ್ನ ಪ್ರಯತ್ನವನ್ನು ಬಿಡದೆ ಮುಂದುವರಿಸುತ್ತಿತ್ತು. ಕಪ್ಪೆಗಳು ಮೇಲಿನಿಂದ "ನಿನ್ನ ಕತೆಯೂ ಅಷ್ಟೇ" ಎಂದು ನಿರಾಶಾವಾದದ ಬಲೆಯನ್ನು

ನೇಯುತ್ತಿದ್ದವು. "ಜಿಗಿದಷ್ಟೂ ಮೈ ನೋಯಿಸಿಕೊಳ್ಳುತ್ತೀ, ಅಷ್ಟೇ. ನೋವುಂಡು ಸಾಯುವ ಬದಲು ನಿನ್ನ ಸ್ನೇಹಿತನಂತೆ ನೋವಿಲ್ಲದ ಸಾವನ್ನು ಒಪ್ಪಿಕೊಳ್ಳುವುದೇ ಮೇಲು" ಎಂದು ಅದೆಷ್ಟು ಸಲ ಹೇಳಿದವೋ! ಆದರೆ ಆ ಕಪ್ಪೆಯು ಮತ್ತಷ್ಟು ಶಕ್ತಿ ಕೂಡಿಸಿಕೊಂಡು ಪ್ರಯತ್ನವನ್ನು ಮುಂದುವರೆಸಿ ಹಳ್ಳದ ದಡ ಸೇರಿ ಬಚಾವಾಯಿತು.

ಮೇಲಕ್ಕೆ ಬಂದ ಕಪ್ಪೆಯನ್ನು ಮಿಕ್ಕ ಕಪ್ಪೆಗಳು ಸುತ್ತುವರೆದವು. ತಮ್ಮ ಮಾತುಗಳಿಗೆ ಲಕ್ಷ್ಯ ಕೊಡದೆ ಕೊನೆಗೂ ಸಾವಿನ ದವಡೆಯಿಂದ ಪಾರಾಗಿ ಬಂದ ಆ ಕಪ್ಪೆಯನ್ನು ಕುರಿತು, "ಎಷ್ಟು ಪ್ರಯತ್ನಿಸಿದರೂ ನೀನು ಬದುಕಲಾರೆ ಎಂದು ನಾವು ಹೇಳುತ್ತಿದ್ದೆವು. ನಿನಗೆ ಕೇಳಿಸುತ್ತಿರಲಿಲ್ಲವೇ?" ಎಂದು ಕೇಳಿದವು. ಆ ಕಪ್ಪೆಯು ನಿಟ್ಟುಸಿರು ಬಿಡುತ್ತಾ "ಎಲ್ಲರೂ ಸೇರಿ ಏನೋ ವಟಗುಟ್ಟುತ್ತಿದ್ದೀರಿ ಅನ್ನಿಸುತ್ತಿತ್ತು. ನನಗೆ ಕಿವಿ ಕೇಳಿಸುವುದಿಲ್ಲ. ಬಹುಶಃ ಪ್ರಯತ್ನವನ್ನು ಬಿಡದೆ ಮುಂದುವರಿಸುವಂತೆ ನನ್ನಲ್ಲಿ ಉತ್ಸಾಹ ತುಂಬುತ್ತಿದ್ದೀರಿ ಎಂದು ಕೊಂಡು ಪ್ರಯತ್ನವನ್ನು ಮುಂದುವರಿಸಿದೆ. ಧನ್ಯವಾದಗಳು" ಎಂದು ಹೇಳಿ ಮುಂದಕ್ಕೆ ಕುಪ್ಪಳಿಸಿತು. ಅವಾಕ್ಕಾದ ಮಿಕ್ಕ ಕಪ್ಪೆಗಳು ಅದನ್ನು ಹಿಂಬಾಲಿಸಿದವು.

**IV. ಸಂಕ್ಷೇಪಿಸಿದ ಬರಹ ಆಧರಿಸಿ ಎರಡು ಪ್ರಶ್ನೆ ರೂಪಿಸಿ.** **2x1=2**

**V. ಇವುಗಳಲ್ಲಿ ಎರಡು ಪದಗಳಿಗೆ ಸ್ವಂತ ವಾಕ್ಯ ರಚಿಸಿ.** **2x2=4**

1. ಕಂಪ್ಯೂಟರ್ 2. ಉದ್ಯೋಗ

3. ಸಹಾಯಕರು 4. ಗ್ರಾಮೀಣ

**VI. ವ್ಯಾಸಂಗ ಪ್ರಮಾಣ ಪತ್ರವನ್ನು ಕೋರಿ ನಿಮ್ಮ ಕಾಲೇಜಿನ ಪ್ರಾಂಶುಪಾಲರಿಗೆ ಒಂದು ಪತ್ರ ಬರೆಯಿರಿ.** **1x5=5**

**VII. ಇವುಗಳಲ್ಲಿ ನಾಲ್ಕು ಪದಗಳಿಗೆ ಅರ್ಥ ಬರೆಯಿರಿ.** **4x1=4**

1. ಜವಳಿ 2. ದುಬಾರಿ 3. ನಿಧಿ

4. ಮಾರಿ 5. ಶಹರು 6. ದಿವಾಳಿ

**VIII. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ಸರಿ ಉತ್ತರವನ್ನು ಗುರುತಿಸಿ ಬರೆಯಿರಿ.** **5x1=5**

1. ರನ್ನನ ಜನ್ಮ ಸ್ಥಳ ಯಾವುದು?

ಅ) ಮುಧೋಳ ಆ) ಕಲಬುರ್ಗಿ ಇ) ಬೆಳಗಾವಿ ಈ) ಮೈಸೂರು

2. ಗಂಡ ಹೆಂಡಿರ ಜಗಳ................

ಅ) ಗಂಧ ತೀಡಿದಾಂಗ ಆ) ಸಗಣಿ ತೀಡಿದಾಂಗ ಇ) ಬೆಣ್ಣೆ ತೀಡಿದಾಂಗ ಈ) ತುಪ್ಪ ತೀಡಿದಾಂಗ

3. "ನಮ್ಮ ನಗರದ ಬದುಕು" ಕವಿತೆಯನ್ನು ರಚಿಸಿದವರು ಯಾರು?

ಅ) ಹಾ.ಮಾ.ನಾ ಆ) ಕೆ.ಎಸ್.ನಿಸಾರ್ ಅಹಮದ್ ಇ) ಜಿ.ಎಸ್.ಎಸ್ ಈ) ಯಶವಂತ ಚಿತ್ತಾಲ

4. ಕರ್ನಾಟಕದ ಜೀವನದಿ ಯಾವುದು?

ಅ) ಗಂಗಾ ಆ) ಸಿಂಧೂ ಇ) ಕಾವೇರಿ ಈ) ಬ್ರಹ್ಮಪುತ್ರ

5. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1906 ರಲ್ಲಿ ಸ್ಥಾಪನೆಯಾದ ಪ್ರಥಮ ಬ್ಯಾಂಕ್ ಯಾವುದು?

ಅ) ಕಾರ್ಪೊರೇಷನ್ ಬ್ಯಾಂಕ್ ಆ) ಬರೋಡ ಬ್ಯಾಂಕ್

ಇ) ಪಂಜಾಬ್ ನ್ಯಾಷನಲ್ ಬ್ಯಾಂಕ್ ಈ) ಆಕ್ಸಿಸ್ ಬ್ಯಾಂಕ್

*********

ST. FRANCIS DE SALES COLLEGE
EXCELLENCE • EFFICIENCY • TRANSFORMATION
ELECTRONICS CITY, BENGALURU